ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಅಂ.ಪೆ.ಸಂ. 5029 ಬೆಂಗಳೂರು-560 001
ದೂರವಾಣಿ : 080 22343905
ಫ್ಯಾಕ್ಸ್ : 080 2228 3758
ಇ-ಮೇಲ್ : **bngcce@kar.nic.in**

ಸಂಖ್ಯೆ:ಕಾಶಿಇ:14:ಯೋಜನೆ:2015-16

ದಿನಾಂಕ: 24-06-2015

# ಸುತ್ತೋಲೆ

**ವಿಷಯ: ಪ್ರತ್ಯಾಯೋಜನಾ ಆರ್ಥಿಕ ಅಧಿಕಾರಗಳನ್ವಯ ನಿಯಮಗಳನ್ನು ಪಾಲಿಸುವ ಬಗ್ಗೆ.**

**ಉಲ್ಲೇಖ: ದಿನಾಂಕ:30.04.2010ರ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ2/ಟಿಎಫ್‌ಪಿ/2010**

--*--

ಇಲಾಖಾ ಮುಖ್ಯಸ್ಥರುಗಳು, ವಲಯ ಮಟ್ಟದ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಪ್ರತ್ಯಾಯೋಜನಾ ಅಧಿಕಾರಗಳನ್ನು ನಿಗಧಿಪಡಿಸಿ ಉಲ್ಲೇಖಿತ ಸರ್ಕಾರದ ಆರ್ಥಿಕ ಇಲಾಖೆಯ ಆದೇಶವನ್ನು ಜಾರಿ ಮಾಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

ಇಲಾಖಾ ವ್ಯಾಪ್ತಿಯ ಕಾಲೇಜುಗಳ ಪ್ರಾಂಶುಪಾಲರುಗಳು ಜಿಲ್ಲಾ ಮಟ್ಟದ ಅಧಿಕಾರಿಗಳಾಗಿದ್ದು, ಕೆಲವು ಪ್ರಾಂಶುಪಾಲರುಗಳು ಅವರ ಅಧಿಕಾರ ವ್ಯಾಪ್ತಿಯ ಮಿತಿಯನ್ನು ಪರಿಗಣಿಸದೇ ಹಾಗೂ ಇಲಾಖೆಯ ಮೇಲಾಧಿಕಾರಿಗಳ ಗಮನಕ್ಕೆ/ಅನುಮೋದನೆಗೆ ಸಲ್ಲಿಸಿ ಆದೇಶ ಪಡೆಯದೇ ಖರೀದಿ ಪ್ರಕ್ರಿಯೆಗಳನ್ನು ನಡೆಸಿರುವುದು ಮತ್ತು ಕಾಮಗಾರಿಗಳನ್ನು ಪ್ರಾರಂಭಿಸಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತವೆ. ಸದರಿ ಪ್ರಕ್ರಿಯೆಗಳು ಮುಗಿದ ನಂತರ ಘಟನೋತ್ತರ ಅನುಮತಿ/ಮಂಜೂರಾತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದನ್ನು ತೀವ್ರವಾಗಿ ಗಮನಿಸಲಾಗಿದೆ.

ಇಲಾಖೆಯಿಂದ ವಿವಿಧ ಬಾಬ್ತುಗಳಿಗೆ ಬಿಡುಗಡೆಗೊಳಿಸುವ ಅನುದಾನ, ಯು.ಜಿ.ಸಿ/ರೂಸಾ ಯೋಜನೆಯನ್ವಯ ಬಿಡುಗಡೆಯಾಗುವ ಅನುದಾನಗಳನ್ನು ಪ್ರತ್ಯಾಯೋಜನಾ ಆರ್ಥಿಕ ಅಧಿಕಾರಗಳನ್ವಯ ಮತ್ತು ಕೆ.ಟಿ.ಪಿ.ಪಿ-ಪಾರದರ್ಶಕ ನಿಯಮಗಳು ಹಾಗೂ ಯು.ಜಿ.ಸಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕ್ರಮವಹಿಸಲು ಸೂಚಿಸಲಾಗಿದೆ. ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿರುವ ಪ್ರತ್ಯಾಯೋಜನಾ ಅಧಿಕಾರಗಳನ್ವಯ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಖರೀದಿ ಪ್ರಕ್ರಿಯೆಗಳನ್ನು ಚಾಲ್ತಿಯಲ್ಲಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಯು.ಜಿ.ಸಿಯ ಅನುದಾನದ ಬಳಕೆ ಸಂಬಂಧಧ ಮಾರ್ಗಸೂಚಿಗಳು ಹಾಗೂ ಮಂಜೂರಾಗುವ ಅನುದಾನದ ಆದೇಶಗಳಲ್ಲಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.

- **"The UGC will not insist on permission letter from the State Government when Government colleges purchase equipment/books under any scheme of the UGC, provided that the purchase is strictly as per laid-down norms & do not violate standard financial rules. However, colleges should submit a list of equipments/books purchased from UGC funds to the State Government at the end of each financial year with a copy marked to the concerned regional office of the UGC Regional Office at the end of each financial year".**
- **"The college shall maintain proper accounts of the expenditure out of the grants which shall be utilized only on approved items of expenditure".**
- **"The grant is subject to the adjustment on the basis of utilization certificate in the prescribed proforma submitted by the college".**
- **"The utilization certificate to the effect that the grant has been utilized for the purpose for which it has been sanctioned shall be furnished to UGC as early as possible after the close of current financial year".**

--2

ಅದರಂತೆ ಪ್ರತ್ಯೇಕ ಖಾತೆ ತೆರೆದು ವೆಚ್ಚದ ಬಗ್ಗೆ ಮಾಹಿತಿ ದಾಖಲಿಸಲು ಸೂಚಿಸಲಾಗಿದೆ. ಕಾಲೇಜುಗಳಿಗೆ ಮಂಜೂರಾಗುವ ಎಲ್ಲಾ ಅನುದಾನಗಳು ಲೆಕ್ಕ ಪರಿಶೋಧನೆಗೆ ಒಳಪಟ್ಟಿರುತ್ತವೆ. ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಾಂಶುಪಾಲರುಗಳು ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಸರ್ಕಾರಿ ಆದೇಶ ಮತ್ತು ನಿಯಮಗಳನ್ನು ಉಲ್ಲಂಘಿಸಿದ ಸಂಬಂಧ ಸೂಕ್ತ ಶಿಸ್ತಿನ ಕ್ರಮಕ್ಕೆ ಒಳಪಡುತ್ತಾರೆ ಎಂಬುದಾಗಿ ಎಚ್ಚರಿಸಲಾಗಿದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ,**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು
4. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ವೆಬ್‌ಸೈಟ್‌ನಲ್ಲಿ ಅಳವಡಿಸಲು.
5. ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ, ಕೇಂದ್ರ ಕಛೇರಿ, ಬೆಂಗಳೂರು.
6. ಕಛೇರಿ ಪ್ರತಿ